ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	815
ಸದಸ್ಯರ ಹೆಸರು	:	ಕೆ.ಟಿ ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	09-03-2021
ಉತ್ತರಿಸುವವರು	:	ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿನ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರೆಷ್ಟು; (ವಿವರ ನೀಡುವುದು)	ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಪೌರ ಕಾರ್ಮಿಕರ ಸಂಖ್ಯೆ-**11911** (ಅನುಬಂಧ-1 ರಲ್ಲಿ ಲಗತ್ತಿಸಿದೆ.)
ಆ)	ಇದರಲ್ಲಿ ಖಾಯಂ ನೌಕರರು ಎಷ್ಟು; ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರೆಷ್ಟು;	ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ **6067** ಜನ ಖಾಯಂ ಪೌರಕಾರ್ಮಿಕರು, **39** ಜನ ಗುತ್ತಿಗೆ ಪೌರಕಾರ್ಮಿಕರು ಮತ್ತು **5805 ಜನ** ನೇರಪಾವತಿ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು-**11911** ಪೌರಕಾರ್ಮಿಕರಿರುತ್ತಾರೆ.
ಇ)	ಇದರಲ್ಲಿ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರಿಗೆ ನೀಡುತ್ತಿರುವ ವೇತನ ಎಷ್ಟು;	ಗುತ್ತಿಗೆ ಪೌರಕಾರ್ಮಿಕರು ಹಾಗೂ ನೇರ ಪಾವತಿ (ಹೊರಗುತ್ತಿಗೆ) ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನದ ಪ್ರಕಾರ ಈ ಕೆಳಕಂಡಂತೆ ಮಾಸಿಕವಾಗಿ ವೇತನ ಪಾವತಿಸಲಾಗುತ್ತದೆ. ನಗರಸಭೆ ಗ್ರೇಡ್-1 — ರೂ.15343/- ನಗರಸಭೆ ಗ್ರೇಡ್-2 — ರೂ.14953/- ಪುರಸಭೆ ಮತ್ತು ಪಟ್ಟಣ ಪಂಚಾಯಿತಿ — ರೂ.14563/-
ಈ)	ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಪಾವತಿಸಲಾಗುತ್ತಿದೆಯೇ; ಇಲ್ಲವಾದಲ್ಲಿ ಕಾರಣವೇನು;	ಗುತ್ತಿಗೆ ಪೌರಕಾರ್ಮಿಕರಿಗೆ ಹಾಗೂ ನೇರ ಪಾವತಿ (ಹೊರಗುತ್ತಿಗೆ) ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯ ಕನಿಷ್ಠ ವೇತನದ ಪ್ರಕಾರ ಮಾಸಿಕವಾಗಿ ಸಮಾನ ವೇತನ ಪಾವತಿಸಲಾಗುತ್ತದೆ.
ಉ)	ಗುತ್ತಿಗೆ, ಹೊರಗುತ್ತಿಗೆ ನೌಕರರನ್ನು ಖಾಯಂ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;	ಕರ್ನಾಟಕ ಪುರಸಭೆಗಳ (ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು 2017 ರೀತ್ಯಾ ಪ್ರತಿ 700 ಜನಸಂಖ್ಯೆಗೆ ಒಬ್ಬರಂತೆ (ಪೌರಕಾರ್ಮಿಕರನ್ನು) ನಿಗದಿ ಗೊಳಿಸಲಾಗಿರುತ್ತದೆ. ಅದರಂತೆ ಈಗಾಗಲೇ 29 ಜಿಲ್ಲೆಗಳಲ್ಲಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

		ಬೆಳಗಾವಿ ಜಿಲ್ಲೆಯ ಒಟ್ಟು-32 ನಗರ ಸ್ಥಳೀಯ ಸಂ ಅಧಿಸೂಚನೆಗೆ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠವು ತಡೆಯಾಜ್ಞೆ ನೀಡಿರುತ್ತದೆ. ಅಧಿಸೂಚನೆ ಹೊರಡಿಸಿದ 255 ನಗರ ಸ್ಥಳೀಯ ಸಂಸ್ಥೆಗಳಲ್ಲಿ 214 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಕ್ರಿಯೆ ಪೂರ್ಣಗೊಂಡಿದ್ದು, 04 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಉಳಿದಂತೆ 37 ನಗರ ಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರ ನೇಮಕಾತಿ ಸಂಬಂಧ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ. (ಬೆಳಗಾವಿ ಜಿಲ್ಲೆಯೂ ಒಳಗೊಂಡಂತೆ). ಇಲ್ಲಿಯವರೆಗೆ **2137** ಪೌರಕಾರ್ಮಿಕರನ್ನು ವಿಶೇಷ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ.

ಸಂಖ್ಯೆ: ನಅಇ 19 ಜಿಇಎಲ್ 2021

(ಎನ್.ನಾಗರಾಜ್ ಎಂ.ಟಿ.ಬಿ)
ಪೌರಾಡಳಿತ ಮತ್ತು ಸಕ್ಕರೆ ಸಚಿವರು

ನಗರಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರ ಮಾಹಿತಿ

ಅನುಬಂಧ-1

ಕ್ರ.ಸಂ	ಜಿಲ್ಲೆ ಹೆಸರು	ಒಟ್ಟು ಖಾಯಂ ಪೌರಕಾರ್ಮಿಕರ ಸಂಖ್ಯೆ	ನೇರ ಪಾವತಿ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ	ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ	ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಪೌರಕಾರ್ಮಿಕರ ಸಂಖ್ಯೆ
1	ಬೆಂಗಳೂರು ನಗರ	61	207	0	268
2	ಬೆಂಗಳೂರು ಗ್ರಾಮಾಂತರ	233	181	0	414
3	ರಾಮನಗರ	155	218	0	373
4	ಮಂಡ್ಯ	206	209	32	447
5	ಮೈಸೂರು	163	131	0	294
6	ತುಮಕೂರು	191	191	0	382
7	ಕೋಲಾರ	213	346	0	559
8	ಕೊಡಗು	63	34	0	97
9	ಚಿತ್ರದುರ್ಗ	183	156	0	339
10	ಹಾಸನ	276	198	0	474
11	ಚಿಕ್ಕಮಗಳೂರು	163	196	5	364
12	ದಕ್ಷಿಣ ಕನ್ನಡ	30	234	0	264
13	ಉತ್ತರ ಕನ್ನಡ	234	101	0	335
14	ಚಿಕ್ಕಬಳ್ಳಾಪುರ	188	152	0	340
15	ದಾವಣಗೆರೆ	122	86	0	208
16	ಉಡುಪಿ	137	159	0	296
17	ಗದಗ	206	165	0	371
18	ಧಾರವಾಡ	96	22	0	118
19	ಬಾಗಲಕೋಟೆ	289	427	0	716
20	ಬೀದರ್	273	141	2	416
21	ವಿಜಯಪುರ	194	124	0	318
22	ಶಿವಮೊಗ್ಗ	183	181	0	364
23	ಕಲಬುರಗಿ	356	5	0	361
24	ಬೆಳಗಾವಿ	235	689	0	924
25	ರಾಯಚೂರು	415	300	0	715
26	ಹಾವೇರಿ	220	255	0	475
27	ಯಾದಗಿರಿ	221	102	0	323
28	ಕೊಪ್ಪಳ	192	238	0	430
29	ಚಾಮರಾಜನಗರ	136	116	0	252
30	ಬಳ್ಳಾರಿ	433	241	0	674
	ಒಟ್ಟು	6067	5805	39	11911